ಅ) ಅವುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಾಗೂ ಕಾರ್ಯ ನಿರ್ವಹಣೆಯನ್ನು ಪ್ರಾರಂಭಿಸದೆ ಇರುವ ಡಿಪ್ಪಿಲರಿಗಳ ಸಂಖ್ಯೆ ಎಷ್ಟು?

ಇ) ಈ ವರ್ಷದಲ್ಲಿ ಮಂಜೂರಾದ ಡಿಪ್ಪಿಲರಿಗಳ ಸಂಖ್ಯೆ ಎಷ್ಟು? (ಮಾಲಿಕತ್ವದ ವಿವರಗಳನ್ನೊಳಗೊಂಡಂತೆ ಜಿಲ್ಲಾವಾರು ವಿವರಗಳನ್ನು ಒದಗಿಸತಕ್ಕದ್ದು)

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):

ಅ) 91, ಮಾಲೀಕತ್ವದ ವಿವರಗಳನ್ನೊಳಗೊಂಡಂತೆ ಜಿಲ್ಲಾವಾರು ವಿವರಗಳನ್ನು ಅನುಬಂಧ -1 ರಲ್ಲಿ ತೋರಿಸಿದೆ.

ಆ) 47 ಡಿಪ್ಪಿಲರಿಗಳ ಕಾರ್ಯ ನಿರ್ವಹಿಸುತ್ತಿವೆ. ಮತ್ತು 44 ಡಿಪ್ಪಿಲರಿಗಳ ಕಾರ್ಯ ನಿರ್ವಹಣೆಯನ್ನು ಪ್ರಾರಂಭಿಸಿರುವುದಿಲ್ಲ.

ಇ) 13 (ಮಾಲಿಕತ್ವದ ವಿವರಗಳನ್ನೊಳಗೊಂಡಂತೆ ಜಿಲ್ಲಾವಾರು ವಿವರಗಳನ್ನು ಅನುಬಂಧ 2 ರಲ್ಲಿ ತೋರಿಸಿದೆ)

ಕಳ್ಳಸಾಗಾಣಿಕೆಗಾರ ವೀರಪ್ಪನನ್ನು ಹಿಡಿಯಲು ಸರ್ಕಾರಕ್ಕೆ ಇಲ್ಲಿಯವರೆವಿಗೂ ತಗುಲಿದ ವೆಚ್ಚ.

2770 - ಶ್ರೀ ಪ್ರಭಾಕರ ಎಸ್. ರಾಣೆ(ಕಾರವಾರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೀರಪ್ಪನನ್ನು ಹಿಡಿಯಲು ಸರ್ಕಾರಕ್ಕೆ ಇಲ್ಲಿಯವರೆವಿಗೂ ತಗುಲಿದ ವೆಚ್ಚವೆಷ್ಟು?

ಆ) ಈ ಉದ್ದೇಶಕ್ಕಾಗಿ ಖರೀದಿಸಿದ ವಾಹನಗಳೆಷ್ಟು?

ಇ) ಈ ಕಾರ್ಯಾಚರಣೆಯ ಸಮಯದಲ್ಲಿ ವ್ಯಕ್ತಿಗಳಿಗೆ, ಮತ್ತು ಆಸ್ತಿಪಾಸ್ತಿಗೆ ಆದ ಹಾನಿ ಮತ್ತು ನಷ್ಟವೆಷ್ಟು? ಹಾಗೂ ಈ ಕಾರ್ಯಾಚರಣೆಯಲ್ಲಿ ನೊಂದವರಿಗೆ ಪರಿಹಾರ ಕೊಡಲಾಗಿದೆಯೇ?

ಈ) ಈ ಕಾರ್ಯಾಚರಣೆಯನ್ನು ಮುಂದುವರಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು) :

ಅ) ರೂ. 14,34,530-00ಗಳು.

ಆ) ಈ ಉದ್ದೇಶಕ್ಕಾಗಿ ವಾಹನಗಳನ್ನು ಖರೀದಿಸಿರುವುದಿಲ್ಲ.

ಇ) ದಿನಾಂಕ 9-4-90 ರಂದು ನಡೆದ ದಾಳಿಯಲ್ಲಿ ಕರ್ನಾಟಕ ರಾಜ್ಯ ಮೀಸಲು ಪಡೆಯ 3 ಜನ ಆರಕ್ಷಕ ಉಪನಿರ್ದೇಶಕರು ಮತ್ತು ಒಬ್ಬ ಪೋಲೀಸ್ ಪೇದೆಗಳು ಮರಣ ಹೊಂದಿದ್ದಾರೆ. ಹಾಗೂ 6 ಜನ ಗಾಯಗೊಂಡಿದ್ದಾರೆ, ಮತ್ತು ದಿನಾಂಕ 7-7-90 ರಂದು ಇಬ್ಬರು ಪೋಲೀಸ್ ಪೇದೆಗಳು ಗಾಯಗೊಂಡಿರುತ್ತಾರೆ. ಈ ಸತ್ತವರ ಕುಟುಂಬಗಳಿಗೆ ಒಟ್ಟು 10,000ರೂ. ಗಳಂತೆ ಪರಿಹಾರ ಧನ ಮತ್ತು ವಿಶೇಷ ಕುಟುಂಬ ವೇತನವನ್ನು ಮಂಜೂರು ಮಾಡಲಾಗಿರುತ್ತೆ.

ಕಳೆದ ಮೂರು ವರ್ಷಗಳಲ್ಲಿ ಅಬಕಾರಿ ಹರಾಜಿನಿಂದ ಬಂದಿರುವ ಆದಾಯ

2730 ಶ್ರೀ ಪ್ರಭಾಕರ ಎಸ್. ರಾಣೆ(ಕಾರವಾರ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಅಬಕಾರಿ ಹರಾಜಿನಿಂದ ಬಂದಿರುವ ಆದಾಯವೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಪ್ರಸ್ತುತ ವರ್ಷದಲ್ಲಿ ಆದಾಯವು ಕಡಿಮೆ ಆಗಿರುವುದು ನಿಜವಲ್ಲವೆ?